ಆ) ವಾರ್ಷಿಕವಾಗಿ ಕನಿಷ್ಟ 2 ಸಾರಿ ಗ್ರಾಮ ಸಭೆ ನಡೆಸಲಾಗುವುದು

ಗ್ರಾಮ ಸಭೆಗೆ ಕ್ಷೇತ್ರ ಇಲಾಖೆಗಳ ಸ್ಥಳೀಯ ಅಧಿಕಾರಿಗಳನ್ನು ಸಭೆಯಲ್ಲಿ ಭಾಗವಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ

ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಗ್ರಾಮಸ್ಥರು ಅಧಿಕಾರಿಗಳೊಡನೆ ಚರ್ಚಿಸುವ ಅವಕಾಶ ಕಲ್ಪಿಸಲಾಗಿದೆ

ಇ) ಸ್ಥಳೀಯ ಕಾಮಗಾರಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವೆಚ್ಚ ಮಾಡುವ ಅನುದಾನದ ವಿವರಗಳ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ

ಸ್ಥಳೀಯ ಚುನಾಯಿತ ಪಂಚಾಯತ್ ಸಂಸ್ಥೆಗಳ ಆರ್ಥಿಕ ವ್ಯವಹಾರಗಳ ಪರಿಶೀಲನೆಗಾಗಿ ಜಮಾಬಂಧಿ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲು ಪಂಚಾಯತ್ ರಾಜ್ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ ಜಮಾ ಬಂದಿ ಕಾರ್ಯಕ್ರಮವನ್ನು ಸಹ ಕಡ್ಡಾಯಗೊಳಿಸಲಾಗಿದೆ

524(941) ಶ್ರೀ ಡಿ ಆರ್ ಪಾಟೀಲ (ಗದಗ್) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗ್ರಾಮೀಣ ಪ್ರದೇಶದಲ್ಲಿ ಮತ್ತು ನಗರ ಪ್ರದೇಶದಲ್ಲಿರುವ ವಸತಿಹೀನರ ಸಂಖ್ಯೆ ಎಷ್ಟು, (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಈ ವಸತಿಹೀನರಿಗೆಲ್ಲ ವಸತಿ ಕಲ್ಪಿಸಲು ಸರಕಾರ ಬದ್ದವಾಗಿದೆಯೇ, ಹಾಗಿದ್ದಲ್ಲಿ, ಈ ಗುರಿ ಮುಟ್ಟಲು ಸರಕಾರದ ಕ್ರಮಗಳೇನು,

ಇ) ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಬೇಕಾಗುವ ಹಣಕಾಸು ಎಷ್ಟು, ಮುಂದಿನ ಆಯವ್ಯಯದಲ್ಲಿ ಒದಗಿಸಲಿರುವ ಹಣ ಎಷ್ಟು,

ಈ) ಎಲ್ಲಾ ವಸತಿ ಬಡ ಕುಟುಂಬಗಳು ಸಾಲ ಮರುಪಾವತಿ ವ್ಯವಸ್ಥೆಗೆ ಒಪ್ಪದಿದ್ದಲ್ಲಿ ಮೊದಲು ಬಂದವರಿಗೆ ಪ್ರಾಶಸ್ತ್ಯ ನೀಡಿ ಫಲಾನುಭವಿಗಳ ಆಯ್ಕೆ ಮಾಡಲಾಗುವುದೆ,

ಉ) ಈ ರೀತಿಯ ಆಯ್ಕೆಯ ಬಗ್ಗೆ ಪಾರದರ್ಶಕತೆಯನ್ನು ಜಾರಿಗೊಳಿಸಲಾಗುವುದೇ?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಸ್ಥಳೀಯ ಸಂಸ್ಥೆಗಳ ಮುಖಾಂತರ ಜೂನ್ 2003ರಲ್ಲಿ ವಸತಿ ರಹಿತರ ಸಮೀಕ್ಷೆಯನ್ನು ಮಾಡಲಾಗಿದ್ದು ಈ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಈ ಕೆಳಗಿನಂತೆ ವಸತಿರಹಿತ ಮತ್ತು ನಿವೇಶನರಹಿತರ ಸಂಖ್ಯೆ ಇರುತ್ತದೆ

ಪ್ರದೇಶ	ವಸತಿ ರಹಿತರು	ನಿವೇಶನ ರಹಿತರು	ಒಟ್ಟು
ಗ್ರಾಮೀಣ	1226345	1042986	2269331
ನಗರ	73444	255827	329271
ಒಟ್ಟು	**1299789**	**1298813**	**2598602**

ತಾಲ್ಲೂಕುವಾರು ವಿವರ 10 ಪುಟಗಳು ಇರುವುದರಿಂದ ಸಂಬಂಧಪಟ್ಟ ಸದಸ್ಯರಿಗೆ ಮಾತ್ರ ಪ್ರತಿಗಳನ್ನು ನೀಡಲಾಗಿದೆ

ಆ) ಹೌದು

ಸಮೀಕ್ಷೆಯ ನಂತರ 2003–04 ರಿಂದ ಇದುವರೆವಿಗೂ ರಾಜ್ಯದಲ್ಲಿ ಒಟ್ಟು 1034311 ಮನೆಗಳ ಗುರಿ ನಿಗದಿಯಾಗಿದ್ದು, ಇನ್ನುಳಿದ ವಸತಿಹೀನರನ್ನು ಪ್ರತಿ ವರ್ಷ ನೀಡುವ ಗುರಿಯಲ್ಲಿ ಹಂತ ಹಂತವಾಗಿ ಪರಿಗಣಿಸಲಾಗುವುದು

ಇ) ಕಾರ್ಯಕ್ರಮ ಅನುಷ್ಠಾನಗೊಳಿಸಲು ಬೇಕಾಗಿರುವ ಹಣಕಾಸಿನ ವಿವರ ಅನುಬಂಧ 'ಅ'ದಲ್ಲಿ ಲಗತ್ತಿಸಿದೆ

2007–08ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಅನುದಾನವನ್ನು ಒದಗಿಸಬೇಕಾಗಿರುತ್ತದೆ

ಈ) ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಗಳಲ್ಲಿ (ಎಲ್ಲಾ ವರ್ಗದ ಫಲಾನುಭವಿಗಳಿಗೆ) ಮತ್ತು ಗ್ರಾಮೀಣ ಆಶ್ರಯ ವಸತಿ ಯೋಜನೆಯಲ್ಲಿ ಎಸ್ ಸಿ /ಎಸ್ ಟಿ ಫಲಾನುಭವಿಗಳಿಗೆ ಸಂಪೂರ್ಣ ಸಹಾಯಧನವಾಗಿರುತ್ತದೆ ಗ್ರಾಮೀಣ ಆಶ್ರಯ ಯೋಜನೆಯಲ್ಲಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಮಾತ್ರ ಪ್ರತಿಶತ 50ರಷ್ಟು ಸಾಲದ ರೂಪದಲ್ಲಿದ್ದು, ಇದನ್ನು 180 ಕಂತುಗಳಲ್ಲಿ (15 ವರ್ಷಗಳಲ್ಲಿ) ಮರು ಪಾವತಿಸಬೇಕು

ನಗರ ಆಶ್ರಯ ಯೋಜನೆಯಡಿ ಎಲ್ಲಾ ವರ್ಗದ ಫಲಾನುಭವಿಗಳಿಗೆ ಸಂಪೂರ್ಣ ಸಾಲವಾಗಿದ್ದು ಇದನ್ನು 180 ಕಂತುಗಳಲ್ಲಿ (15 ವರ್ಷಗಳಲ್ಲಿ) ಮರು ಪಾವತಿಸಬೇಕು

ಸಾಮಾನ್ಯ ವರ್ಗದ ಫಲಾನುಭವಿಗಳು ಸಾಲವನ್ನು ಮರುಪಾವತಿ ಮಾಡಲು ಒಪ್ಪದಿದ್ದಲ್ಲಿ ಅವರಿಗೆ ಮನೆ ನೀಡಲು ಬರುವುದಿಲ್ಲ.

ಊ) ಜೂನ್ 2003ರಲ್ಲಿ ವಸತಿ ರಹಿತರ ಸಮೀಕ್ಷೆಯನ್ನು ಮಾಡಲಾಗಿದ್ದು, ಈ ಸಮೀಕ್ಷೆಯನ್ನು ಆಧರಿಸಿ ಫಲಾನುಭವಿಗಳನ್ನು ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡುವ ಮೂಲಕ ಪಾರದರ್ಶಕತೆಯನ್ನು ಜಾರಿಗೊಳಿಸಲಾಗುತ್ತಿದೆ

525(942) ಶ್ರೀ ಡಿ ಆರ್ ಪಾಟೀಲ್ (ಗದಗ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2001–02 ಹಣಕಾಸು ವರ್ಷದಿಂದ 2006–07 ಹಣಕಾಸು ವರ್ಷಗಳಲ್ಲಿ ಕರ್ನಾಟಕ ಸರಕಾರ ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗಳೆಷ್ಟು,

ಆ) ಅದರಲ್ಲಿ ಕೇಂದ್ರ ಸರಕಾರದಿಂದ ಮಂಜೂರಾದ ಪ್ರಸ್ತಾವನೆಗಳು ಎಷ್ಟು, (ತಾಲ್ಲೂಕುವಾರು ಹಾಗೂ ಹಣಕಾಸುವಾರು ಮಾಹಿತಿ ನೀಡುವುದು)

ಇ) ಗದಗ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯ ಅನುಷ್ಠಾನ ಯಾವ ರೀತಿ ನಡೆದಿದೆ, (ಪ್ರತಿ ಹಣಕಾಸು ವರ್ಷವಾರು ವಿವರ ನೀಡುವುದು)

ಈ) ಈ ಕೆಲಸಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಕೈಗೊಂಡಿರುವ ಕ್ರಮಗಳೇನು,

ಉ) ಕಳಪೆ ಮಟ್ಟದ ಕಾರ್ಯ ಮಾಡಿರುವ ಗುತ್ತಿಗೆದಾರರನ್ನು ಮುಂದಿನ ಯಾವುದೇ ಕೆಲಸಗಳಲ್ಲಿ ಭಾಗವಹಿಸದಂತೆ ಸರಕಾರ ಕ್ರಮ ಕೈಗೊಂಡಿದೆಯೇ, (ವಿವರ ನೀಡುವುದು)?